## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ವೆಂಕಟೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಟಿ.ನರಸೀಪುರ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು.

ಓದಲಾಗಿದೆ: 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ ಉಪಲೋಕ್/ಎಂ.ವೈ.ಎಸ್-2904/2014, ದಿನಾಂಕ:30.08.2016

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ ಉಪಲೋಕ್ಎಂ.ವೈ.ಎಸ್-2904/2014/ಡಿಆರ್ಇ-4, ದಿನಾಂಕ: 17.09.2016.

****

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. 2012-13ನೇ ಕಲಯೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇಂದಿರಾ ಆವಾಸ್ ವಸತಿ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿಯ ಹಾಲಿ ಸದಸ್ಯರು ಮತ್ತು ಬಿಲ್ ಕಲೆಕ್ಟರ್, ಇವರುಗಳು ಮನೆ ಕಟ್ಟದೆ ಯಾವುದೊ ಮನೆಯನ್ನು ಜಿ.ಪಿ.ಎಸ್. ಮಾಡಿ ಮನೆ ಕಟ್ಟಿರುವುದಾಗಿ ಸುಳ್ಳು ದಾಖಲಾತಿ ನೀಡಿ ಮಂಜೂರು ಮಾಡಿಸಿಕೊಂಡು ಅಕ್ರಮವೆಸಗಿರುತ್ತಾರೆಂದು ಆರೋಪಿಸಿ ಈ ಕೆಳಕಂಡ ಅಧಿಕಾರಿ/ಅಧಿಕಾರೇತರರುಗಳ ವಿರುದ್ಧ ಶ್ರೀಮತಿ ಶಾಂತ ಬಿನ್ ಚಿಕ್ಕೂಸು, ಕಲಿಯೂರು ಗ್ರಾಮ ಪಂಚಾಯತಿ ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ, ಇವರು ನೀಡಿದ್ದ ದೂರಿನ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರನ್ವಯ ತನಿಖೆಗೆ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತ-2 ರವರ ವರದಿಯಲ್ಲಿ ನಮೂದಿಸಲಾಗಿರುತ್ತದೆ.

| ಕ್ರಸಂಖ್ಯೆ: | ಅಧಿಕಾರಿಯ ಹೆಸರುಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಕುಮಾರ್, ನೋಡಲ್ ಅಧಿಕಾರಿ, ತಾಲ್ಲೂಕು ಪಂಚಾಯತ್ ಟಿ.ನರಸೀಪುರ ತಾಲ್ಲೂಕು | 1 |

| | | |
|---|---|---|
| 2 | ಶ್ರೀ ರಾಜ್‌ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕಲಿಯೂರು ಗ್ರಾಮ ಪಂಚಾಯತಿ | 2 |
| 3 | ಶ್ರೀ ವೆಂಕಟೇಶ್, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಟಿ.ನರಸೀಪುರ. | 3 |
| 4 | ಶ್ರೀ ದೇವರಾಜ್, ಬಿಲ್ ಕಲೆಕ್ಟರ್, ಕಲಿಯೂರು ಗ್ರಾಮ ಪಂಚಾಯತಿ. | 4 |

ದೂರುದಾರರ ದೂರಿನ ಬಗ್ಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆ ಮೈಸೂರು ಇವರು ಶ್ರೀ ಕೆ.ಜಿ.ಪ್ರಕಾಶಗೌಡ, ಪೋಲಿಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ ಮೈಸೂರು ಇವರಿಂದ ತನಿಖಾ ವರದಿಯನ್ನು ಪಡೆದು ತಮ್ಮ ಅಭಿಪ್ರಾಯದೊಂದಿಗೆ ಪೋಲಿಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಮೈಸೂರು ಇವರು ದಿನಾಂಕ: 06.04.2015 ರಂದು ಸಲ್ಲಿಸಿದ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆಂದು ಮಾನ್ಯ ಉಪಲೋಕಾಯುಕ್ತ-2 ರವರ ವರದಿಯಲ್ಲಿ ನಮೂದಿಸಲಾಗಿದೆ.

1. 2012-13ನೇ ಸಾಲಿನಲ್ಲಿ ಕಲಿಯೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ (1) ಪಂಚಾಯತಿ ಅಭಿವೃದ್ಧಿ ಅಧಿಕಾರಿ (2) ಗ್ರಾಮ ಪಂಚಾಯತಿ ಅಧ್ಯಕ್ಷರು (3) ಉಪಾಧ್ಯಕ್ಷರು ಹಾಗೂ (4) ಸದಸ್ಯರುಗಳು ಇಂದಿರಾ ಆವಾಜ್ ಯೋಜನೆಯಲ್ಲಿ ಇಲಾಖೆ ನೀಡಿರುವ ನಿಯಮ ಮತ್ತು ಮಾರ್ಗಸೂಚಿಗಳನ್ನು ಪಾಲಿಸದೇ ಸ್ವ-ಇಚ್ಛೆಯಿಂದ ಆರ್ಥಿಕವಾಗಿ ಬಲಾಢ್ಯವಾಗಿರುವವರನ್ನು ಫಲಾನುಭವಿಗಳಾಗಿ ಆಯ್ಕೆ ಮಾಡಿರುವುದು ಹಾಗೂ ಅಧಿಕಾರದಲ್ಲಿರುವ ಜನಪ್ರತಿನಿಧಿಗಳು ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರುಗಳನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸಿ ತಾವೇ ಫಲಾನುಭವಿಗಳಾಗಿದ್ದು, ಸದರಿಯವರುಗಳಿಗೆ ಈಗಾಗಲೇ ಮನೆ ಇದ್ದರೂ ಸಹ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು ವಿಚಾರಣೆಯಿಂದ ದೃಢಪಟ್ಟಿರುತ್ತದೆಂದು, ಹಾಗೂ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಸದಸ್ಯತ್ವ ರದ್ದು ಮಾಡಿ ಅವರುಗಳ ವಿರುದ್ಧ ಪ್ರಕರಣ ದಾಖಲು ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.
2. (1) ಶ್ರೀ ರಾಜ್‌ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ (2) ವೆಂಕಟೇಶ್, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಟಿ.ನರಸೀರಪುರ(3) ಶ್ರೀಕುಮಾರ್, ನೋಡಲ್ ಅಧಿಕಾರಿ (4) ಶ್ರೀ ದೇವರಾಜ್, ಬಿಲ್‌ಕಲೆಕ್ಟರ್, ಕಲಿಯೂರು ಗ್ರಾಮ ಪಂಚಾಯತಿ, ಇವರುಗಳನ್ನು ಅಮಾನತ್ತಿಗೊಳಪಡಿಸಿ ಅವರುಗಳ ವಿರುದ್ಧ ಪ್ರಕರಣ ದಾಖಲು ಮಾಡಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಕೋರಲಾಗಿದೆ.

– ತನಿಖಾಧಿಕಾರಿಗಳ ವರದಿಯ ಬಗ್ಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು 2 ರಿಂದ 4 ರವರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ ತನಿಖಾ ವರದಿಯ ಆಪಾದನೆಗಳನ್ನು ನಿರಾಕರಿಸಿರುತ್ತಾರೆಂದು, ಪ್ರಸ್ತುತ ಹಂತದಲ್ಲಿ ಸದರಿ ಎದುರುದಾರರುಗಳ ಆಕ್ಷೇಪಣೆಗಳನ್ನು ಒಪ್ಪಿರುವುದಿಲ್ಲವೆಂದು ವರದಿಸಲಾಗಿದೆ.

ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಸಂಸ್ಥೆ, ಮೈಸೂರು ಇವರಿಂದ ಪಡೆಯಲಾದ ತನಿಖಾ ವರದಿ ಮತ್ತು ಕಡತದಲ್ಲಿನ ಆಧಾರಗಳಿಂದ ಎದುರುದಾರರು 2 ರಿಂದ 4 ರವರು ಮತ್ತು ಅಧ್ಯಕ್ಷರು, ಉಪಾಧ್ಯಕ್ಷರು, ಮತ್ತು ಸದಸ್ಯರುಗಳು 2012-13ನೇ ಸಾಲಿನಲ್ಲಿ ಇಂದಿರಾ ಆವಾಜ್ ಯೋಜನೆಯಲ್ಲಿ ಇಲಾಖೆ ನೀಡಿರುವ ನಿಯಮ ಮತ್ತು ಮಾರ್ಗಸೂಚಿಗಳನ್ನು ಪಾಲಿಸದೆ ಸ್ವ-ಇಚ್ಛೆಯಿಂದ ಆರ್ಥಿಕವಾಗಿ ಬಲಾಡ್ಯರಾಗಿರುವವರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡಿ ಹಾಗೂ ಅಧಿಕಾರದಲ್ಲಿರುವ ಜನ ಪ್ರತಿನಿಧಿಗಳು ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರುಗಳನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸಿ ತಾವೆ ಫಲಾನುಭವಿಗಳಾಗಿದ್ದು, ಸದರಿಯವರುಗಳಿಗೆ ಮನೆಗಳಿದ್ದರೂ ನಿಯಮಾವಳಿ ಉಲ್ಲಂಘಿಸಿ ಕರ್ತವ್ಯಲೋಪವೆಸಗಿರುವುದು ಕಂಡು ಬಂದಿರುತ್ತದೆ ಎಂದು ಮಾನ್ಯ ಕರ್ನಾಟಕ ಲೋಕಾಯುಕ್ತ-2 ರವರ ವರದಿಯಲ್ಲಿ ನಮೂದಿಸಲಾಗಿದೆ.

ಎದುರುದಾರರು 2 ರಿಂದ 4 ರವರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ ಮಾನ್ಯ ಉಪಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅದರಂತೆ, ಕ್ರಮವಹಿಸುವಂತೆ ನಿಬಂಧಕರು, ಇವರು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಶಿಫಾರಸ್ಸು ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು 2 ರಿಂದ 4 ರವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಎದುರುದಾರರು 3 ರವರಾದ ಶ್ರೀ ಕುಮಾರ್ ನೋಡಲ್ ಅಧಿಕಾರಿ, ತಾಲ್ಲೂಕು ಪಂಚಾಯತ್ ಟಿ.ನರಸೀಪುರ, ಇವರು ಸರ್ಕಾರೇತರ

ನೌಕರರಾಗಿರುವುದರಿಂದ, ಇವರ ವಿರುದ್ಧದ ಸಿ.ಸಿ.ಎ ನಿಯಮಗಳನ್ವಯ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ. ಆದುದರಿಂದ, ಮಾನ್ಯ ಉಪ ಲೋಕಾಯುಕ್ತ-2 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ, ಶ್ರೀ ವೆಂಕಟೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಟಿ.ನರಸೀಪುರ, ಹಾಗೂ ಶ್ರೀ ರಾಜ್‌ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲಿಯೂರು ಗ್ರಾಮ ಪಂಚಾಯತಿ ಟಿ.ನರಸೀಪುರ ತಾಲ್ಲೂಕು. ಇವರುಗಳ ವಿರುದ್ಧದ ಆರೋಪಗಳ ಸಂಬಂಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 221 ವಿಸೇಬಿ 2016 ಬೆಂಗಳೂರು ದಿನಾಂಕ: 19-12-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಶ್ರೀ ವೆಂಕಟೇಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಟಿ.ನರಸೀಪುರ, ಹಾಗೂ ಶ್ರೀ ರಾಜ್‌ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲಿಯೂರು ಗ್ರಾಮ ಪಂಚಾಯತಿ ಟಿ.ನರಸೀಪುರ ತಾಲ್ಲೂಕು. ಇವರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-2, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

19/12/2016

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-2 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಮೈಸೂರು.
4) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು

2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

---